ಲೋಕಸೇವಾ ಆಯೋಗದಲ್ಲಿ ಎರವಲು ಸೇವೆಯಲ್ಲಿರತಕ್ಕಂಥ ಅಧಿಕಾರಿಗಳು ತಂದಂಥ ಸುಧಾರಣೆಗಳು

೨೭೯. (ಬಿ) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎರವಲು ಸೇವೆಯ ಪದ್ಧತಿಯನ್ನು ಕೆಪಿಎಸ್‌ಸಿಯಲ್ಲಿ ಎಂದಿನಿಂದ ಪ್ರಾರಂಭ ಮಾಡಲಾಯಿತು ಮತ್ತು ಎರವಲು ಸೇವೆ ತರಲು ಕಾರಣಗಳೇನು ?

ಆ) ಎರವಲು ಸೇವೆಯ ಅಧಿಕಾರಿಗಳು ತಂದಂಥ ಆಡಳಿತ ಸುಧಾರಣೆಗಳು ಯಾವುವು ?

ಇ) ಇಂಥ ಅಧಿಕಾರಿಗಳಿಂದ ಪರೀಕ್ಷಾ ಫಲಿತಾಂಶಗಳು ಪ್ರಕಟವಾಗುವಲ್ಲಿ ತೋರಿದ ಆಸಕ್ತಿ ಏನು (ಹಿಂದಿನ ಅಧಿಕಾರಿಗಳು ತೆಗೆದುಕೊಂಡ ಸಮಯದ ವಿವರ ಒದಗಿಸುವುದು).

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಎರವಲು ಸೇವೆ ಪದ್ಧತಿ ೧೯೫೭ ರಿಂದಲೂ ಜಾರಿಯಲ್ಲಿದೆ. ಲೋಕ ಸೇವಾ ಆಯೋಗದ ಕಾರ್ಯಕಲಾಪಗಳಲ್ಲಿರಬೇಕಾದ ಹೆಚ್ಚಿನ ದಕ್ಷತೆಯನ್ನು ಗಮನಿಸಿ ಈ ಪದ್ಧತಿಯನ್ನು ಹಾಕಿಕೊಳ್ಳಲಾಯಿತು.

ಆ) ಆಯೋಗದ ವ್ಯವಸ್ಥಾತ್ಮಕ ಆಡಳಿತವು ಅಲ್ಲಿಯ ಸಿಬ್ಬಂದಿ ವರ್ಗದ ಸಾಮೂಹಿಕ ಪ್ರಯತ್ನದ ಪ್ರತಿಫಲವಾಗಿರುತ್ತದೆ. ಎರವಲು ಸೇವೆಯಲ್ಲಿರುವ ಅಧಿಕಾರಿಗಳ ಬಗ್ಗೆ ಪ್ರತ್ಯೇಕವಾದ ಅಳತೆಗೋಲು ಇಟ್ಟುಕೊಂಡಿರುವುದಿಲ್ಲ.

ಇ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಸರಕಾರದ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಹಾಗೂ ಈ ವರ್ಷ ನಿವೃತ್ತರಾಗುತ್ತಿರುವ ಸರಕಾರಿ ನೌಕರರು

೧೬೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೭ನೇ ಸಾಲಿನ ಡಿಸೆಂಬರ್ ಕೊನೆಯವರೆಗೆ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಈ ವರ್ಷ ನಿವೃತ್ತರಾಗಿರುವ ಸರಕಾರಿ ನೌಕರರ ಸಂಖ್ಯೆ ಎಷ್ಟು (ಡಿಸೆಂಬರ್ ಮಾಹೆಯ ಕೊನೆಯವರೆಗಿನ ವಿವರವನ್ನೊದಗಿಸುವುದು) ;

ಇ) ನಿವೃತ್ತಿ ವಯೋಮಿತಿಯನ್ನು ೫೫ ವರ್ಷಗಳಿಗೆ ಇಳಿಸಲು ಸರಕಾರಕ್ಕೆ ಇರುವ ತೊಂದರೆಯೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಈಗ ಖಾಲಿ ಇರುವ ಹುದ್ದೆಗಳ ಸಂಖ್ಯೆ. ೪೫,೭೯೯.

ಆ) ೧೯೮೪ರ ಆಗಸ್ಟ್‌ನಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸಿದ್ದರಿಂದ ಸರ್ಕಾರಿ ನೌಕರರ ನಿವೃತ್ತಿ ೧೯೮೭ರ ಆಗಸ್ಟ್ ತಿಂಗಳಿಂದ ಪ್ರಾರಂಭವಾಗಿದೆ ಮತ್ತು ೧೯೮೭ರ ಅಂತ್ಯದವರೆಗೆ ಸುಮಾರು ೨,೦೦೦ ನೌಕರರು ನಿವೃತ್ತರಾಗಿರುವರೆಂದು ಅಂದಾಜು ಮಾಡಲಾಗಿದೆ. ನಿರ್ದಿಷ್ಟ ನೌಕರರ ಸಂಖ್ಯೆ ಸದ್ಯಕ್ಕೆ ಲಭ್ಯವಿಲ್ಲ.

ಇ) ನಿವೃತ್ತಿ ವಯಸ್ಸನ್ನು ೫೫ವರ್ಷಕ್ಕೆ ಇಳಿಸಲು ಸಬಲ ಕಾರಣಗಳಿಲ್ಲ.